**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು**

| | |
|---|---|
| ಎಸ್ ಸಿ : | 231/**22** |

| | | |
|---|---|---|
| ಸಾಕ್ಷಿದಾರರ ಹೆಸರು | ಪದ್ಮಾ | |
| ಗಂಡನ ಹೆಸರು | ಲಿಂಗಾಚಾರಿ | ಸಾಕ್ಷಿಗೆ ದಿಃ **24.08.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **45** ವರ್ಷ | |
| ಉದ್ಯೋಗ | ಕೂಲಿ ಕೆಲಸ | ಪಿ.ಡಬ್ಲ್ಯೂ **-01** |
| ವಾಸ ಸ್ಥಳ | ಬ್ರಹ್ಮಪುರ ಗ್ರಾಮ, ನಗುವನಹಳ್ಳಿ, ಪೋಸ್ಟ ಶ್ರೀರಂಗಪಟ್ಟಣ ತಾಲ್ಲೂಕು. | ಸಿ.ಡಬ್ಲ್ಯೂ **-01** |

**ಪಾಟೀಸವಾಲು :-ಆರೋಪಿ ಪರ ವಕೀಲರಾದ ಎನ್.ಎನ್.ಆರ್. ರವರಿಂದಃ-**

ನಾನು ಶಾಲೆ ಓದಿರುವುದಿಲ್ಲ, ನನಗೆ ಸಹಿ ಮಾಡಲು ಬರುತ್ತದೆ. ಪಿರ್ಯಾಧಿಯ್ನು ನನ್ನ ಮಗನ ಕೈಯಿಂದ ಪೊಲೀಸ್ ಠಾಣೆಯಲ್ಲಿ ಬರೆಸಿರುತ್ತೇನೆ. ನನ್ನ ಮಗ ಪಿರ್ಯಾಧಿ ಬರೆದಿರುತ್ತಾನೆ ನಾನು ಸಹಿ ಮಾಡಿರುತ್ತೇನೆ. ಪಿರ್ಯಾಧಿ ಕೊಡಲು ನಾನು ಮತ್ತು ನನ್ನ ಮಗ ಪೊಲೀಸ್ ಠಾಣೆಗೆ ಹೋಗಿದ್ದೆವು. ಪಿರ್ಯಾಧಿಯನ್ನು ಪೊಲೀಸರು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ನಾವು ಐದು ಜನ ಮಕ್ಕಳು ಇರುತ್ತೇವೆ, ಐದು ಜನರಲ್ಲಿ ಒಬ್ಬನೇ ಗಂಡು ಮಗ ಇದ್ದನು. ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತೇವೆ. ನನ್ನ ಮದುವೆ ನಮ್ಮ ಅಣ್ಣ ಮಾಡದನು ಎಂದರೆ ಸರಿಯಲ್ಲ, ಸಾಕ್ಷಿಯು ನಮ್ಮ ತಾಯಿ ಮದುವೆ ಮಾಡಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಅಣ್ಣ ಮುಂದೆ ನಿಂತುಕೊಂಡು ನಾಲ್ಕು ಜನ ಸಹೋದರಿಯರ ಮದುವೆ ಮಾಡಿದ್ದಾನೆ ಎಂದರೆ ಸರಿ ಇದೆ. ಮದುವೆಯಾದ ಮೇಲೆ ನಾಲ್ಕು ಜನ ಸಹೋದರಿಯರು ಗಂಡನ ಮನೆಯಲ್ಲಿ ವಾಸವಾಗಿರುತ್ತೇವೆ. ನಮ್ಮ ತಾಯಿ ಸುಖವಾಗಿ ಇರಲಿ ಎಂದು ನನ್ನ ಸಹೋದರ 2 ನೇ ಮಹಡಿಯಲ್ಲಿ ಕೋಣೆ ಕಟ್ಟಿಸಿದ್ದನು ಎಂದರೆ ಸರಿ ಇದೆ. ನಮ್ಮ ಅಣ್ಣ ಜೀವಿತಾ ಕಾಲದಲ್ಲಿ ನಮ್ಮ ತಾಯಿಯನ್ನು

ಸರಿಯಾಗಿ ನೋಡಿಕೊಳ್ಳುತ್ತಿದ್ದರು ಎಂದು ಕೇಳಿದ್ದಕ್ಕೆ ಸಾಕ್ಷಿಯು ನಮ್ಮ ತಾಯಿಗೆ ಕಾಯಿಲೆ ಇರಲಿಲ್ಲ ಎಂದು ಹೇಳುತ್ತಾರೆ. ನಮ್ಮ ಅಣ್ಣ ಜೀವಂತ ಇದ್ದಾಗ ನಾವು ನಮ್ಮ ಅಣ್ಣನ ಮನೆಗೆ ಬಂದು ಹೋಗುತ್ತಿದ್ದೆವು. ನನ್ನ ಸಹೋದರ ನಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಾಯಿ ನಮ್ಮ ಅಣ್ಣನ ಒಂದು ಕಾಲು ಅಪಘಾತದಲ್ಲಿ ಹೋಗಿದ್ದರಿಂದ ನಮ್ಮ ತಾಯಿಯೇ ಆತನನ್ನು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಅಪಘಾತಕ್ಕಿಂತ ಮೊದಲು ನಮ್ಮ ಅಣ್ಣ, ನಮ್ಮ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದು ಕೇಳಿದ್ದಕ್ಕೆ ಸಾಕ್ಷಿಯು ಊಟ ಕೊಡುತ್ತಿರಲಿಲ್ಲ, ಮಾತು ಚೆನ್ನಾಗಿ ಆಡುತ್ತಿದ್ದರು ಎಂದು ಹೇಳುತ್ತಾರೆ. ನಿಮಗೆ ನಿಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದು ಹೇಗೆ ಗೊತ್ತು ಎಂದು ಕೇಳಿದ್ದಕ್ಕೆ ಸಾಕ್ಷಿಯು ನಮ್ಮ ತಾಯಿಯು ನಮ್ಮ ಹತ್ತಿರ ಬಂದು ಹೇಳುತ್ತಿದ್ದರು ಎಂದು ಹೇಳುತ್ತಾರೆ.

ಆರೋಪಿತರು ಕೂಡಾ ನಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮನೆ ನಮ್ಮ ಅಣ್ಣ ಸಿದ್ದಾಚಾರಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಆರೋಪಿತರು ಕೂಡಾ ಅದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ ಇದೆ. ಆದ್ದುದ್ದರಿಂದ ನಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ನಮ್ಮ ತಾಯಿಗೆ ಊಟ ಮತ್ತು ಔಷೋದೋಪಚಾರ ಮಾಡಿ, ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಆಗಾಗ ಮನೆಗೆ ಬಂದು ನಮ್ಮ ತಾಯಿಯ ಜೊತೆ ಆಸ್ತಿಯಲ್ಲಿ ಪಾಲು ಬೇಕು ಎಂದು ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಹೇಳುತ್ತಾರೆ ನಮ್ಮ ಅಣ್ಣನು ಮೃತಪಟ್ಟ ಮೇಲೆ ನಾವು ಆ ಮನೆ ಕಡೆಗೆ ಹೋಗಿಲ್ಲ ಎಂದು ಹೇಳುತ್ತಾರೆ. ಪ್ರಿತಾರ್ಜಿತ ಆಸ್ತಿ ಮಾರಿದಾಗ ನನ್ನ ತಾಯಿ, ನನಗೂ ಮತ್ತು ನನ್ನ ಸಹೋದರಿಯರಿಗೆ ಸಮ ಪಾಲು ಕೊಟ್ಟಿದ್ದರು ಎಂದರೆ ಸರಿಯಲ್ಲ. ಮನೆಯು ಸಿದ್ದಾಚಾರಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಆಸ್ತಿಯಲ್ಲಿ ಯಾವತ್ತು ಪಾಲು ಕೇಳಿಲ್ಲ ಎಂದು ಹೇಳುತ್ತಾರೆ.

ನಮ್ಮ ಅಣ್ಣ ಮೃತಪಟ್ಟ ನಂತರ, 4 ನೇ ಆರೋಪಿ ನಮ್ಮ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 4 ನೇ ಆರೋಪಿ ನಮ್ಮ ತಾಯಿಯ ಹೆಸರಿನಲ್ಲಿ ರೂ. 49,000/- ಸಾವಿರ ರೂಪಾಯಿ ಎಫ್.ಡಿ ಇಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನಮ್ಮ ತಾಯಿಯನ್ನು ನೋಡಿಕೊಳ್ಳಲು ನಾವು ಹಣ ಕೊಟ್ಟಿದ್ದೆವು ಎಂದು ಹೇಳುತ್ತಾರೆ. ನಾವು ಹಣ ಕೊಟ್ಟರೇ 3 ನೇ ಆರೋಪಿಯ ಹೆಸರು ನಾಮಿನಿ ಎಂದು ಬರೆಸುತ್ತಿರಲಿಲ್ಲ ಎಂದರೆ ಸರಿ ಇದೆ. ನಾವು ನಮ್ಮ ತಾಯಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಅಣ್ಣ ಮೃತಪಟ್ಟ ನಂತರ ನೀವು ನಿಮ್ಮ ಅಣ್ಣನ ಮನೆಗೆ ಬರುವುದು ಬಿಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಸಾಕ್ಷಿಯು ನಮ್ಮ ತಾಯಿಗೆ ತೊಂದರೆ ಕೊಡುತ್ತಿದ್ದರು ಅದಕ್ಕೆ ನಾವು ನಮ್ಮ ತಾಯಿಯ ಮನೆಗೆ ಬರುವುದು ಬಿಟ್ಟಿರುತ್ತೇವೆ.

ನಾವು ಹಣಕೋಸ್ಕರ ನಮ್ಮ ಅಣ್ಣನ ಮನೆಗೆ ಬರುತ್ತಿದ್ದೆವು ಎಂದರೆ ಸರಿಯಲ್ಲ. ನಾವು ನಮ್ಮ ತಾಯಿಗೆ ಕಿರುಕುಳ ಕೊಟ್ಟು ಬ್ಯಾಂಕಿನಲ್ಲಿ ಇದ್ದ ರೂ. 49,000/- ಸಾವಿರ ರೂಪಾಯಿ ಹಣ ಡ್ರಾ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಆರೋಪಿತರ ಮನೆಗೆ ಆಗಾಗ ಬಂದು ಪಾಲು ಕೊಡಿ ಎಂದು ಕೇಳಿ ಅವಾಚ್ಯವಾಗಿ ಬೈದ್ದು ಹೋಗುತ್ತಿದೆವು ಎಂದರೆ ಸರಿಯಲ್ಲ. ನಮ್ಮ ತಾಯಿ, ನಮಗೆ ಪಾಲು ಕೊಡಿಸುತ್ತೇನೆ ಎಂದು ಹೇಳಿ ನಮಗೆ ಸಮಾಧಾನ ಮಾಡಿ ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾಯಿಗೆ ಕೈ ಮುರಿದಾಗ ಠಾಣೆಗೆ ಹೋಗಿ ಪಿರ್ಯಾಧಿ ಕೊಡಲು ನಿಮಗೆ ತೊಂದರೆ ಇತ್ತಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ನಮಗೆ ತೊಂದರೆ ಇರಲಿಲ್ಲ ನಮ್ಮ ತಾಯಿಗೆ ಕೈ ಮುರಿದಾಗ, ಮದುವೆ ಇದೆ ಜಗಳ ಮಾಡುವುದು ಬೇಡ ಎಂದು ಹೇಳಿ ಅವಳಿಗೆ ನಾನೇ ಚಿಕಿತ್ಸೆ ಕೊಡಿಸಿ ಅವರನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೆ ಎಂದು ಹೇಳುತ್ತಾರೆ. ಆರೋಪಿತರು ನಮ್ಮ ತಾಯಿಯ ಕೈ ಮುರಿದು ಹಾಕಿಲ್ಲ ಎಂದರೆ ಸರಿಯಲ್ಲ.

<u>**7**</u>

ನಮ್ಮ ತಾಯಿಗೆ ಶುಗರ್ ಮತ್ತು ಬಿ.ಪಿ ಇದ್ದುದ್ದರಿಂದ ಅವರಿಗೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ತಾಯಿಯ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಹಿಟ್ಟಿನ ದೊಣ್ಣೆಯಿಂದ ನಮ್ಮ ತಾಯಿಗೆ ಹೊಡೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಇನ್ನೊಬ್ಬರ ಸಹಾಯ ಬೇಕಿತ್ತು ಎಂದರೆ ಸರಿಯಲ್ಲ. ನಮ್ಮ ತಾಯಿ ರಾತ್ರಿ ಶೌಚಾಲಯಕ್ಕೆ ಹೋದಾಗ, ಕಾಲು ಜಾರಿ ಬಿದ್ದು, ಗಾಯ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಾಯಿ ಶೌಚಾಲಯಕ್ಕೆ ಹೋಗಿ ಬಂದು ಕೀ ಹಾಕಿಕೊಂಡು ಬಂದು ಒಳಗಡೆ ಮಲಗಿದ್ದರು ಎಂದರೆ ಸರಿಯಲ್ಲ. ಮನೆಯ ಕಿಟಕಿಯ ಗಾಜುಗಳು ಒಡೆದಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮಾ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿ ಪಾಲು ಬೇಕು ಎಂದು ಆರೋಪಿತರ ಮೇಲೆ ಸುಳ್ಳು ಕೇಸು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಮೃತಳ ಸಾವಿಗೆ ಕಾರಣರು ಅಲ್ಲ ಎಂದರೆ ಸರಿಯಲ್ಲ. ಅತ್ತಿಗೆಯ ಮೇಲಿನ ಹಳೆಯ ದ್ವೇಷದಿಂದ ಸುಳ್ಳು ಕೇಸು ಹಾಕಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆಃ- ಇಲ್ಲ.**</u>

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು